ಅ. ಕೋಮು ಸೌಹಾರ್ದತೆಗಾಗಿ 1993ರ ಜನವರಿ–ಫೆಬ್ರುವರಿ ತಿಂಗಳಿನಲ್ಲಿ ಮಾನವ ಸರಪಳಿಯನ್ನು ರಾಜ್ಯದಾದ್ಯಂತ ರಚಿಸಲಾಗಿತ್ತೇ ?

ಆ. ಹಾಗಿದ್ದಲ್ಲಿ, ಇದಕ್ಕಾಗಿ ಖರ್ಚು ಮಾಡಿದ ಮೊತ್ತ ಎಷ್ಟು ? (ವಿವಿಧ ಸಂಘ – ಸಂಸ್ಥೆಗಳಿಗಾಗಿ ಮಂಜೂರು ಮಾಡಿದ ಹಣದ ಬಗ್ಗೆ ಜಿಲ್ಲಾವಾರು ಮಾಹಿತಿ ಒದಗಿಸುವುದು)

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯಮಂತ್ರಿಗಳು)

ಅ. ಇಲ್ಲ. ದಿನಾಂಕ: 30.1.93ರಂದು ಈ ಕೆಳಕಂಡ ಸ್ಥಳಗಳಲ್ಲಿ ಮಾತ್ರ ಮಾನವ ಸರಪಳಿಯನ್ನು ಏರ್ಪಡಿಸಲಾಗಿತ್ತು.

1. ಹುಬ್ಬಳಿಯಿಂದ ಧಾರವಾಡ
2. ಧಾರವಾಡದಿಂದ ಬೆಳಗಾಂ
3. ಗುಲ್ಬರ್ಗಾದಿಂದ ಬೀದರ್
4. ಬೆಂಗಳೂರಿನಿಂದ ಮೈಸೂರು
5. ಮಂಗಳೂರಿನಿಂದ ಉಡುಪಿ

ಆ. 40 ಲಕ್ಷ ರೂ ಗಳು (ಜಿಲ್ಲಾವಾರು ಮಾಹಿತಿಯನ್ನು ಲಗತ್ತಿಸಲಾಗಿದೆ.)

'ಕೋಮು ಸೌಹಾರ್ದತಾ ಸಪ್ತಾಹ'ದ ಅಂಗವಾಗಿ ಜಿಲ್ಲಾವಾರು ಅನುದಾನ ಬಿಡುಗಡೆ ಮಾಡಿರುವುದನ್ನು ತೋರಿಸುವ ಪಟ್ಟಿ.

ಜಿಲ್ಲೆಗಳು	ರೂಪಾಯಿಗಳು (ಲಕ್ಷಗಳಲ್ಲಿ)
1. ಬೆಂಗಳೂರು (ಗ್ರಾಮಾಂತರ)	5.00
2. ಬೆಳಗಾಂ	5.00
3. ಧಾರವಾಡ	5.00
4. ಗುಲ್ಬರ್ಗಾ	5.00
5. ಬೀದರ್	5.00
6. ಮಂಡ್ಯ	5.00
7. ಮೈಸೂರು	5.00
8. ದಕ್ಷಿಣ ಕನ್ನಡ	5.00
ಒಟ್ಟು	40.00

ಶ್ರೀ ಹಾರ್ನಹಳ್ಳಿ ರಾಮಸ್ವಾಮಿ:– ಮಾನ್ಯ ಅಧ್ಯಕ್ಷರೆ, ಲಿಖಿತ ಮೂಲಕ ಉತ್ತರಿಸುವ ದಿನಾಂಕ 2.3.1993ರ 10ನೇ ಪಟ್ಟಿಯಲ್ಲಿರುವ 86 ಪ್ರಶ್ನೆಗಳ ಪೈಕಿ, ಪ್ರಶ್ನೆಗಳ ಸಂಖ್ಯೆ 577, 523, 769, 488, 351, 99, 576, 737, 738, 1334 ಎ, 959, 1330, 1356, 1946, 1329, 1310, 1292, 1215 ಮತ್ತು 1282 ಈ ಪ್ರಶ್ನೆಗಳನ್ನು ಹೊರತು ಪಡಿಸಿ ಇನ್ನು ಉಳಿದ 37 ಚುಕ್ಕೆ ಗುರುತಿಲ್ಲದ ಪ್ರಶ್ನೆಗಳ ಉತ್ತರಗಳನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ರಾಜ್ಯದ ಸ್ವಾತಂತ್ರ್ಯ ಯೋಧರಿಗೆ ಸರ್ಕಾರದ ಸೌಲಭ್ಯಗಳು.

504 (1157): ಶ್ರೀ ಎ. ಕೆ. ಅನಂತಕೃಷ್ಣ (ಶಿವಾಜಿನಗರ)